ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
Total No. of Questions : 26 ] [ Total No. of Printed Pages : 8

**ಸಂಕೇತ ಸಂಖ್ಯೆ : 102-EK (NS)**

**Code No. : 102-EK (NS)**

# ಡಿ.ಇಡಿ. ಪ್ರಥಮ ವರ್ಷ
# D.Ed. FIRST YEAR
## ಶಿಕ್ಷಣ
## EDUCATION
# ಮೂಲ ಪರಿಕಲ್ಪನೆಗಳ ಪರಿಚಯ
# INTRODUCTION TO BASIC CONCEPTS

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)
(Kannada & English Versions)

**(ಹೊಸ ಪಠ್ಯವಸ್ತು)**
**(New Syllabus)**

ದಿನಾಂಕ : 16. 05. 2019 ]
Date : 16. 05. 2019 ]
ಸಮಯ : ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60
Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate* [ ]

(ಕನ್ನಡ ಭಾಷಾಂತರ)
(Kannada Version)

## ಭಾಗ – I

**ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ :** $10 \times 1 = 10$

1. ಶಾಲಾ ಶಿಕ್ಷಣ ವ್ಯವಸ್ಥೆಯ ಪ್ರಮುಖ ಕೇಂದ್ರ ಬಿಂದು ಹಾಗೂ ಪ್ರಥಮ ಆದ್ಯತೆ ಇದಾಗಿದೆ.
   (A) ಶಿಕ್ಷಣದ ಗುರಿ ಮತ್ತು ಉದ್ದೇಶಗಳು
   (B) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ
   (C) ಶಿಕ್ಷಣದಲ್ಲಿನ ಬೋಧನಾ ವಿಧಾನಗಳು
   (D) ಕಲಿಕೋಪಕರಣಗಳು

2. ಮಗುವನ್ನು ಸಾಮಾಜೀಕರಣಗೊಳಿಸುವ ಪ್ರಥಮ ಸಂಸ್ಥೆ
   (A) ಸಮವಯಸ್ಕರು (B) ಕುಟುಂಬ
   (C) ಶಾಲೆ (D) ಸಮುದಾಯ

3. ಹರಿಣಿಯು 10 ವರ್ಷದ ಮಗು. ಆಕೆ ಮೂರ್ತ ಸನ್ನಿವೇಶಗಳಲ್ಲಿ ಸಂಕೇತವನ್ನು ತಾರ್ಕಿಕ ರೂಪದಲ್ಲಿ ಬಳಸುವ ಸಾಮರ್ಥ್ಯ ಹೊಂದಿದ್ದಾಳೆ. ಹಾಗಿದ್ದಲ್ಲಿ ಹರಿಣಿಯು ಈ ಕೆಳಗಿನ ಬೌದ್ಧಿಕ ಬೆಳವಣಿಗೆಯ ಹಂತದಲ್ಲಿ ಇದ್ದಾಳೆ.

(A) ಕಾರ್ಯ ಪೂರ್ವ ಹಂತ (B) ಔಪಚಾರಿಕ ಕಾರ್ಯಗಳ ಹಂತ

(C) ಸಂವೇದನಾಗತಿ ಹಂತ (D) ಮೂರ್ತ ಕಾರ್ಯಗಳ ಹಂತ

4. ಎರಡಕ್ಕಿಂತ ಹೆಚ್ಚಿನ ವರ್ಗದ ವಿದ್ಯಾರ್ಥಿಗಳಿಗೆ ಏಕಕಾಲದಲ್ಲಿ ಒಂದೇ ಕೋಣೆಯಲ್ಲಿ ಬೋಧಿಸುವುದೇ

(A) ಏಕ ಶಿಕ್ಷಕ ಬೋಧನೆ (B) ಸಹಪಾಠಿಗಳ ಬೋಧನೆ

(C) ಬಹುವರ್ಗ ಬೋಧನೆ (D) ಸಹಕಾರದ ಕಲಿಕೆ

5. ಮಗುವಿಗೆ ಸಮಸ್ಯೆಗಳು, ಭಾವನೆಗಳು, ಕಲ್ಪನೆಗಳು – ಹತಾಶೆಗಳನ್ನು ವ್ಯಕ್ತಪಡಿಸಲು ಅವಕಾಶ ನೀಡುವ ಆಟ

(A) ಸಾಂಕೇತಿಕ ಆಟ (B) ನಾಟಕೀಕರಣ

(C) ಪರಿಚಯಿಸುವ ಆಟ (D) ಬದಲಿ ಆಟ

6. I. ವಿಮರ್ಶಾತ್ಮಕ ಬುದ್ಧಿವಂತಿಕೆ ಎಂದರೆ ಅಮೂರ್ತವಾಗಿ ಚಿಂತನೆ ನಡೆಸುವುದು.

II. ಸೃಜನಾತ್ಮಕ ಬುದ್ಧಿವಂತಿಕೆ ಎಂದರೆ ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳುವುದು.

III. ಪ್ರಯೋಗಿಕ ಬುದ್ಧಿವಂತಿಕೆ ಎಂದರೆ ಹೊಸ ಅನುಭವಗಳನ್ನು ನಿಭಾಯಿಸುವುದು.

ಬುದ್ಧಿವಂತಿಕೆ ಕುರಿತ ಮೇಲಿನ ಯಾವ ಹೇಳಿಕೆ ಸಮರ್ಪಕವಾಗಿದೆ ?

(A) II ಮಾತ್ರ ಸರಿ (B) II ಮತ್ತು III

(C) I ಮತ್ತು III (D) I ಮಾತ್ರ ಸರಿ

7. ಶಿಕ್ಷಕರೊಬ್ಬರು ಚಲಿಸುವ, ಸ್ಪರ್ಶಿಸುವ, ಪ್ರಯೋಗ ಮಾಡುವ, ಕೈಚಳಕ ತೋರುವ ಚಟುವಟಿಕೆಗಳನ್ನು ತರಗತಿಯಲ್ಲಿ ಹೆಚ್ಚಾಗಿ ಬಳಸುತ್ತಿದ್ದಾರೆ. ಅವರು ಈ ಬಗೆಯ ಕಲಿಕಾರ್ಥಿಗಳಿಗೆ ಕಲಿಕೆಯನ್ನು ಅನುಕೂಲಿಸುತ್ತಿದ್ದಾರೆ

(A) ಸ್ಪರ್ಶಕದ ಕಲಿಕಾರ್ಥಿ (B) ವೀಕ್ಷಣಾ ಕಲಿಕಾರ್ಥಿ

(C) ಆಲಿಕೆಯ ಕಲಿಕಾರ್ಥಿ (D) ಬರಹದ ಕಲಿಕಾರ್ಥಿ

8. ಸಂವಿಧಾನದ 21A ಅನುಚ್ಛೇದದಲ್ಲಿ ಪ್ರಸ್ತಾಪಿಸಿರುವ ಅಂಶ

(A) ಭಾರತದ ಸಾರ್ವಭೌಮತೆ ಮತ್ತು ಅಖಂಡತೆ ಸಂರಕ್ಷಿಸುವುದು

(B) ಸರ್ಕಾರದ ಧನ ಸಹಾಯ ಪಡೆಯುವ ಶಿಕ್ಷಣ ಸಂಸ್ಥೆಯು ಯಾವುದೇ ಧಾರ್ಮಿಕ ಬೋಧನೆ ನೀಡುವಂತಿಲ್ಲ

(C) ಶಿಕ್ಷಣವು 6 ರಿಂದ 14 ನೇ ವಯೋಮಾನದ ಮಕ್ಕಳ ಮೂಲಭೂತ ಹಕ್ಕು

(D) ಕೇಂದ್ರ ಸರ್ಕಾರ ಧರ್ಮ, ಲಿಂಗದ ಆಧಾರದ ಮೇಲೆ ಯಾವುದೇ ಪ್ರಜೆಗೆ ಪಕ್ಷಪಾತ ಮಾಡಬಾರದು

9. ಶಾಲಾ ವ್ಯವಸ್ಥೆಯಲ್ಲಿ ಸಮುದಾಯ ಮಾಲೀಕತ್ವವನ್ನು ಅಳವಡಿಸಿಕೊಂಡ ಭಾರತದ ವ್ಯಾಪಕ ಕಾರ್ಯಯೋಜನೆ
   (A) ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಯೋಜನೆ
   (B) ಸರ್ವಶಿಕ್ಷಾ ಅಭಿಯಾನ
   (C) ನಲಿ–ಕಲಿ
   (D) ಪಡೇ ಭಾರತ್ ಭಡೇ ಭಾರತ್
10. ಅಂತಸ್ತಿನ ವ್ಯತ್ಯಾಸಗಳನ್ನು ಅಂದರೆ ಸಂಪತ್ತು ಮತ್ತು ಅಧಿಕಾರದಲ್ಲಿನ ವೈವಿಧ್ಯತೆಯನ್ನು ಸೂಚಿಸಲು ಸಮಾಜಶಾಸ್ತ್ರಜ್ಞರು ಬಳಸುವ ಪದ
   (A) ಸಾಂಸ್ಕೃತಿಕ – ಆರ್ಥಿಕ ಸ್ಥಾನಮಾನ
   (B) ಸಾಮಾಜಿಕ – ರಾಜಕೀಯ ಸ್ಥಾನಮಾನ
   (C) ಸಾಮಾಜಿಕ – ಆರ್ಥಿಕ ಸ್ಥಾನಮಾನ
   (D) ಸಾಂಸ್ಕೃತಿಕ – ಸಂವೇದನಾತ್ಮಕ ಸ್ಥಾನಮಾನ

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ :** 5 × 2 = 10

11. ಉತ್ತರ ಬಾಲ್ಯಾವಸ್ಥೆಯನ್ನು ಮಕ್ಕಳ ನಿರ್ಲಕ್ಷ್ಯತನದ ವಯಸ್ಸು ಎಂದು ಏಕೆ ಕರೆಯುವರು ?
12. ಕಲಿಕಾಗತಿ ಎಂದರೇನು ?
13. ಶ್ರವಣ ದೋಷವುಳ್ಳ ಮಗುವಿಗೆ ತರಗತಿಯಲ್ಲಿ ಆಹ್ಲಾದಕರ ವಾತಾವರಣ ಹೇಗೆ ಸೃಷ್ಟಿಸುವಿರಿ ?
14. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ( DPEP ) ಯ ನಾಲ್ಕು ಮುಖ್ಯ ಉದ್ದೇಶಗಳನ್ನು ತಿಳಿಸಿ.
15. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳ ಸಮಸ್ಯೆಗಳ ಕುರಿತ ರಾಷ್ಟ್ರೀಯ ಫೋಕಸ್ ಗುಂಪಿನ ಪೋಜಿಷನ್ ಪೇಪರ್‌ನ ಎರಡು ಶಿಫಾರಸ್ಸುಗಳನ್ನು ಪಟ್ಟಿ ಮಾಡಿ.
16. RTE ಕಾಯಿದೆ 2009 ರ ಪ್ರಾಮುಖ್ಯತೆ ಏನು ?
17. ಭಾರತವು ಮಕ್ಕಳಿಗೆ ಮೂಲಭೂತ ಹಕ್ಕು ನೀಡುವಲ್ಲಿ ತನ್ನ ಬದ್ಧತೆಯನ್ನು ತೋರಿದೆ ಎಂಬುದನ್ನು ಕುರಿತು ಎರಡು ಸೂಚ್ಯಂಕಗಳನ್ನು ಪಟ್ಟಿ ಮಾಡಿ.
18. ಮಗುವಿನ ಸಾಮಾಜೀಕರಣದಲ್ಲಿ ಸಂಸ್ಕೃತಿಯ ಪಾತ್ರವನ್ನು ವಿವರಿಸಿ.

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಮತ್ತು (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ :** 8 × 5 = 40

19. a) ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ( NCF 2005 ) ರಲ್ಲಿ ತಿಳಿಸಿರುವ ನಾಲ್ಕು ಶೈಕ್ಷಣಿಕ ಗುರಿಗಳನ್ನು ಪಟ್ಟಿ ಮಾಡಿ, ಯಾವುದಾದರೂ ಎರಡನ್ನು ವಿವರಿಸಿ.

*ಅಥವಾ*

   b) ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಪಠ್ಯಕ್ರಮ ಚೌಕಟ್ಟು – 2009 ( NCFTE 2009 ) ರಲ್ಲಿ ತಿಳಿಸಿರುವಂತೆ ಶಿಕ್ಷಕರ ನಾಲ್ಕು ಗುಣಗಳನ್ನು ಪಟ್ಟಿ ಮಾಡಿ, ಯಾವುದಾದರೂ ಎರಡನ್ನು ವಿವರಿಸಿ.

20. a) "ಶಾಲಾ ಪರಿಸರದಲ್ಲಿ ಸಾಮಾಜೀಕರಣದ ಪ್ರಮುಖ ಅಂಶವೆಂದರೆ ಶಿಕ್ಷಕ ವಿದ್ಯಾರ್ಥಿ ಸಂಬಂಧ." ಈ ಹೇಳಿಕೆಯನ್ನು ವಿಶ್ಲೇಷಿಸಿ.

*ಅಥವಾ*

b) "ಸಮುದಾಯ ಮತ್ತು ಸಮೂಹ ಮಾಧ್ಯಮ ಒಂದು ಮಗುವಿನ ಸಾಮಾಜೀಕರಣದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತವೆ." ವಿಶ್ಲೇಷಿಸಿ.

21. a) ಶೈಕ್ಷಣಿಕ ಸಮಾಜಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಿ.

*ಅಥವಾ*

b) ಸಾಂಪ್ರದಾಯಿಕ ಮತ್ತು ಒಳಗೊಳ್ಳುವ ವಿಧಾನಕ್ಕಿರುವ ವ್ಯತ್ಯಾಸವೇನು ?

22. a) ವೀಕ್ಷಣಾ ಕಲಿಕಾರ್ಥಿಗಳು ಹಾಗೂ ಸ್ಪರ್ಶ ಕಲಿಕಾರ್ಥಿಗಳಿಗೆ ಬೋಧನಾ ತಂತ್ರಗಳನ್ನು ಹೇಗೆ ಯೋಜಿಸುವಿರಿ ?

*ಅಥವಾ*

b) ಮೂರ್ತ ಕಾರ್ಯ ಹಂತದ ಮಕ್ಕಳಿಗೆ ಯಾವ ರೀತಿಯ ಚಟುವಟಿಕೆಗಳನ್ನು ಆಯೋಜಿಸುವಿರಿ ?

23. a) "ತಾರುಣ್ಯಾವಸ್ಥೆಯು ಆದರ್ಶವಾದದ ಅವಧಿ." ಈ ಹೇಳಿಕೆಯನ್ನು ವಿಶ್ಲೇಷಿಸಿ.

*ಅಥವಾ*

b) "ಬಾಲ್ಯಾವಸ್ಥೆಯು ಪಾಲಕರಿಗೆ ತ್ರಾಸದಾಯಕ ಅವಧಿ." ಈ ಹೇಳಿಕೆಯನ್ನು ವಿಶ್ಲೇಷಿಸಿ.

24. a) ಮಕ್ಕಳ ಸಾಮಾಜಿಕ ಬೆಳವಣಿಗೆಯಲ್ಲಿ ಆಟದ ಪಾತ್ರವನ್ನು ವಿವರಿಸಿ.

*ಅಥವಾ*

b) ಸಂರಚನಾವಾದದ ತತ್ವಗಳನ್ನು ವಿವರಿಸಿ.

25. a) "ಋಣಾತ್ಮಕ ಮನೋಧೋರಣೆಯು ಒಳಗೊಳ್ಳುವಿಕೆಗಿರುವ ದೊಡ್ಡ ಅಡೆತಡೆಯಾಗಿದೆ." ಈ ಹೇಳಿಕೆಯನ್ನು ವಿಶ್ಲೇಷಿಸಿ.

*ಅಥವಾ*

b) "ವೈವಿಧ್ಯತೆಯು ಒಂದು ಒಳಗೊಳ್ಳುವ ತರಗತಿಯಲ್ಲಿ ಸಂಪನ್ಮೂಲವೇ ಹೊರತು ಸಮಸ್ಯೆಯಲ್ಲ." ಈ ಹೇಳಿಕೆಯನ್ನು ವಿಶ್ಲೇಷಿಸಿ.

26. a) ಪ್ರತಿಭಾವಂತ ಮಕ್ಕಳಿಗೆ ಕಲಿಕೆಯನ್ನು ಹೆಚ್ಚು ಆಸಕ್ತಿದಾಯಕ ಮತ್ತು ಹೆಚ್ಚು ಸಮಂಜಸ ಮಾಡಲು ನೀವು ತೆಗೆದುಕೊಳ್ಳುವ ಐದು ಕ್ರಮಗಳನ್ನು ತಿಳಿಸಿ.

*ಅಥವಾ*

b) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳು ಶಿಕ್ಷಣದಲ್ಲಿ ಹೆಚ್ಚು ಒಳಗೊಳ್ಳುವಂತೆ ಮಾಡಲು ನೀವು ಕೈಗೊಳ್ಳುವ ಐದು ಕ್ರಮಗಳನ್ನು ತಿಳಿಸಿ.

**( English Version )**

## PART – I

Four choices have been given for each of the following questions. Choose the most appropriate answer and write in the answer-book. All the questions are compulsory. $10 \times 1 = 10$

1. First preference and the core of a schooling system are
   (A) aims and objectives of education
   (B) continuous and comprehensive evaluation
   (C) teaching methods in education
   (D) learning materials.

2. The first agency which socializes the child is
   (A) Peer group (B) Family
   (C) School (D) Community.

3. Harini is a ten-year old child, who can manipulate symbols logically in a concrete situation. If so, Harini is in which of the following stages of intellectual development ?
   (A) Pre-operational stage
   (B) Formal operation stage
   (C) Sensori-motor stage
   (D) Concrete operational stage.

4. Teaching more than two grades of students at the same time in one classroom is called
   (A) Single teacher teaching
   (B) Peer group teaching
   (C) Multigrade teaching
   (D) Co-operative learning.

5. A play which gives opportunities for a child to express its problems, feelings, imaginations and frustrations, is
   (A) Symbollic play (B) Dramatic play
   (C) Familiarization play (D) Surrogate play.

6. Consider the following statements :

   I. Analytic intelligence refers to the ability to think abstractly.

   II. Creative intelligence involves adaptation to context.

   III. Practical intelligence involves coping with new experiences.

   Which of the above statements is / are correct about intelligence ?

   (A) II only (B) II and III

   (C) I and III (D) I only.

7. A teacher is using activities which involve doing, touching, moving, manipulating and experimenting. Teacher is catering to the needs of which kind of learners ?

   (A) Kinesthetic learners (B) Visual learners

   (C) Auditory learners (D) Writing learners.

8. The aspect which is proposed in the Article 21(A) of the Constitution is

   (A) To uphold and protect the sovereignty, unity and integrity of India.

   (B) No religious instruction shall be provided in any educational institutions wholly maintained out of state funds.

   (C) Education is a fundamental right for children in the age group of 6-14 years.

   (D) The state shall not discriminate against any citizen on grounds of religion, race, caste only or any of them.

9. India's flagship programme for Universalization of Elementary Education by community ownership of the school system is

   (A) DPEP

   (B) Sarva Shiksha Abhiyan

   (C) Nali Kali

   (D) Padhe Bharat Badhe Bharat.

10. The term used by sociologists to denote class difference that is diversity in power and wealth is

   (A) Cultural-economic status (B) Socio-political status

   (C) Socio-economic status (D) Cultural-emotional status.

## PART – II

Answer any *five* of the following questions briefly, each answer not exceeding *half a* page. $5 \times 2 = 10$

11. Why is late childhood known as period of carelessness ?
12. What is meant by learning pace ?
13. How do you create a congenial classroom atmosphere for a child who is hearing disabled ?
14. Mention four main objectives of DPEP.
15. List out two recommendations of the National Focus Group's position paper on the problem of 'SC' and 'ST' children.
16. What is the importance of RTE Act, 2009 ?
17. List out two indicators which show that India has made significant commitment towards ensuring the basic rights of children.
18. Explain the role of culture in socialization of a child.

## PART – III

There is an alternate question for each of the following. Answer either *'a'* or *'b'*, each answer not exceeding *one* page. $8 \times 5 = 40$

19. (a) List out four educational aims as envisaged in the NCF 2005 and explain any two.

OR

(b) List out four qualities of a teacher as envisaged in the NCFTE 2009 and explain any two.

20. (a) "The most important factor of socialization in school environment is the teacher-student relationship." Analyse the statement.

OR

(b) "Community and mass media play a great role in socialization of a child." Analyse.

21. (a) Explain the scope of sociology of education.

OR

(b) Differentiate between traditional approach and inclusive approach.

22. (a) How do you plan teaching strategies for visual learners and kinesthetic learners ?

OR

(b) What activities would you plan for children at concrete operational stage ?

23. (a) "Adolescence is a period of idealism." Analyse the statement.

OR

(b) "Childhood is a troublesome period for parents." Analyse the statement.

24. (a) Explain the role of play in social development of children.

OR

(b) Explain the principles of constructivism.

25. (a) "The biggest barrier to inclusion is the negative attitude." Analyse the statement.

OR

(b) Diversity in an inclusive classroom is a resource to be tapped rather than a problem to be addressed." Analyse the statement.

26. (a) Mention five measures that you would take up to make learning more interesting and relevant for gifted children.

OR

(b) Mention five measures that you would take up to make education more inclusive for Scheduled Caste and Scheduled Tribe children.